ದಿನಾಂಕಃ 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ಕೆಐಜಿ ವಕೀಲರಿಂದ:</u>

ನಾನು 7 ನೇ ತರಗತಿವರೆಗೆ ವಿದ್ಯಾಭಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕಃ 10-07-1987. ಆ ಬಗ್ಗೆ ಶಾಲಾ ದಾಖಲೆಗಳನ್ನು ಹಾಜರಪಡಿಸಿಲ್ಲ, ಆದರೆ ಆಧಾರ ಕಾರ್ಡ ಹಾಜರಪಡಿಸಿರುತ್ತೇನೆ. ಸಾಮಾನ್ಯವಾಗಿ ಆಧಾರ ಕಾರ್ಡನಲ್ಲಿ ಜನ್ಮ ದಿನಾಂಕ ನಮ್ಮ ಹೇಳಿಕೆಯ ಪ್ರಕಾರ ನಮೂದು ಮಾಡುತ್ತಾರೆ ಎಂದರೆ ಸರಿ. ನಮ್ಮ ಮನೆತನಕ್ಕೆ 2 ಎಕರೆ ಜಮೀನು ಇದ್ದು, ಆ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ. ನಿಪಿ-21 ರಿಂದ 23 ರ ಪಹಣಿ ಪತ್ರಿಕೆಯಲ್ಲಿ 7 ಜನರ ಹೆಸರು ಜಂಟಿಯಾಗಿ ಇರುತ್ತವೆ ಎಂದರೆ ಸರಿ. ಕೇವಲ 1 ಎಕರೆ 9 ಗುಂಟೆ ಜಮೀನು ಮಾತ್ರ ಸದರಿ ದಾಖಲೆಗಳಲ್ಲಿ ಕಂಡುಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಾವೇ ಸಾಗುವಳಿ ಮಾಡುತ್ತೇವೆ. ನಾನು ಪ್ರತಿ ತಿಂಗಳು 15 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ವ್ಯವಸಾಯದಲ್ಲಿ ನಿಶ್ಚಿತವಾಗಿ ಎಷ್ಟು ಆದಾಯ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

ಅಪಘಾತದ ದಿನಾಂಕ ಗೊತ್ತಿಲ್ಲ, ಆದರೆ ಅಕ್ಟೋಬರ – 2023 ರಲ್ಲಿ ಆಗಿರುತ್ತದೆ. ಆ ದಿನ ನಾನು ಮನೆಯಿಂದ ಬೆಳಿಗ್ಗೆ 11.00 ಗಂಟೆಗೆ ಬಿಟ್ಟಿದ್ದೆನು. ದೂರು ನನ್ನ ತಾಯಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ನನ್ನ ತಾಯಿ ಇರಲಿಲ್ಲ ಎಂದರೆ ಸರಿ. ಅಪಘಾತದ ಬಗ್ಗೆ ನನ್ನ ತಾಯಿಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿ. ಆ ದಿನ ಮೋಟರ ಸೈಕಲ್ ನಾನೇ ಚಲಾಯಿಸುತ್ತಿದ್ದೆನು. ಆ ದಿನ ನನ್ನ ಮೋಟರ ಸೈಕಲ್ ಗೆ ಇನ್ಸುರನ್ಸ ಇರಲಿಲ್ಲ. ನಾನು ವಾಹನ ಚಲಾಯಿಸಲು ಚಾಲನಾ ಪರವಾನಿಗೆ ಹೊಂದಿರಲಿಲ್ಲ. ಆ ದಿನ ನಾನು ಹೆಲ್ಮೆಟ್ ಧರಿಸಿದ್ದೆನು. ಅದನ್ನು ಪೋಲಿಸರು ಜಪ್ತಿಪಡಿಸಿಕೊಂಡಿಲ್ಲ. ಸದರಿ ಪ್ರಕರಣದಲ್ಲಿ ನಾನು ಚಾಲನಾ ಪರವಾನಿಗೆ ಹೊಂದದೇ, ವಿಮೆ ಇಲ್ಲದೆ ಮತ್ತು ಹೆಲ್ಮೆಟ್ ಧರಿಸದೇ ಮೋಟರ ಸೈಕಲ್ ಚಲಾಯಿಸಿರುವ ಬಗ್ಗೆ ದೋಷರೋಪಣ ಪತ್ರ ಹಾಕಿರುತ್ತಾರೆ ಎಂದರೆ ಸರಿ.

ಲೋಕಾಪೂರ-ಬಟಕುರ್ಕಿಕ ರಸ್ತೆಯು 40 ಅಡಿ ಅಗಲ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರ ಪ್ರಕಾರ ರಸ್ತೆ 40 ಅಡಿ ಅಗಲ ಇದೆ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ಜಮೀನಿಗೆ ಹೋಗುವ ರಸ್ತೆ ಕಚ್ಚಾ ರಸ್ತೆ ಇದ್ದು, ಸ್ವಲ್ಪ ತಿರುವಿನಿಂದ ಕೂಡಿದೆ ಎಂದರೆ ಸರಿ. ರಸ್ತೆ ತಿರುವಿನಿಂದ ಕೂಡಿರುವುದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ಜಮೀನಿಗೆ ಹೋಗುವ ರಸ್ತೆ ದಾಟಿದ ನಂತರ ಎಡಗಡೆಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ಟ್ರಾಕ್ಟರ ಇಂಜಿನ್ ನನಗೆ ಅಪಘಾತಪಡಿಸಿರುತ್ತದೆ. ಟ್ರಾಕ್ಟರನ ಯಾವುದೇ ಇಂಜಿನ್ ಭಾಗ ನನಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ಮುಖ್ಯ ರಸ್ತೆ ನೇರವಾದ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅಪಘತ ತಪ್ಪಿಸಲು ನನಗೆ ಅವಕಾಶ ಇತ್ತು ಹಾಗೂ ನನ್ನ ಮೋಟರ ಸೈಕಲ್ ಸ್ವಲ್ಪ ಬಲಗಡೆ ಚಲಾಯಿಸಬಹುದಾಗಿತ್ತು ಎಂದರೆ ಸರಿಯಲ್ಲ. ನಾನೇ ಮೋಟರ ಸೈಕಲ್ ನ್ನು ಅತೀ ವೇಗ ಮತ್ತು ಆಲಕ್ಯತನದಿಂದ ಚಲಾಯಿಸಿ ಟ್ರಾಕ್ಟರ ಟ್ರೇಲರ ಹಿಂದಿನಗಾಲಿಗೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಸಾರಿಗೆ ಅಧಿಕಾರಿಗಳು ಟ್ರಾಕ್ಟರ ಇಂಜಿನ್ ಭಾಗ ಜಖಂಗೊಂಡಿಲ್ಲ, ಟ್ರೇಲರ ಹಿಂದಿನ ಟೈರ ಸ್ವಲ್ಪ ಜಖಂಗೊಂಡಿರುವುದಾಗಿ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮೋಟರ ಸೈಕಲ್ ನಿಂದ ನಾನೇ ಟ್ರಾಕ್ಟರ ಗೆ ಹಾಯಿಸಿ ಅಪಘಾತವಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರಾಕ್ಟರ ಮುಂದೆ ಹೋಗುತ್ತಿರುವುದರಿಂದ ಅಪಘಾತಪಡಿಸಲು ಸಾಧ್ಯವಿಲ್ಲ, ನಾನೇ ಟ್ರಾಕ್ಟರ ಹಿಂದಿನಿಂದ ಚಲಾಯಿಸಿ ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ 10 ದಿನ ಚಿಕಿತ್ಸೆ ಪಡೆದಿರುವ ಬಗ್ಗೆ ದಾಖಲೆಯನ್ನು ಹಾಜರಪಡಿಸಿರುತ್ತೇನೆ. ಅಪಪಘಾತದಿಂದ ಗಾಯಗಳಾಗಿರುತ್ತವೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ವೈದ್ಯರು ಎಂಎಲ್‌ಸಿ ವರದಿ ನೀಡಿರುತ್ತಾರೆ. ಆ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ವಿಚಾರಣೆ ಮಾಡಿ, ಒಂದು ದಿನ ತಡವಾಗಿ ಪರಿಹಾರ ಪಡೆಯುವ ಸಲುವಾಗಿ ಈ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ 2 ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಈಗಲೂ ನಾನು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಸಾಯಿ ಆಸ್ಪತ್ರೆಯಲ್ಲಿ ಸಂಪೂರ್ಣವಾಗಿ

ಗುಣಮುಖವಾದ ನಂತರ ದಿನಾಂಕಃ 04-11-2023 ರಂದು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಮುಂದಿನ ಚಿಕಿತ್ಸೆ ಕುರಿತು 50 ಸಾವಿರ ರೂಪಾಯಿ ಬೇಕಾಗುತ್ತದೆ ಎಂದು ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ ಎದುರುದಾರನು ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.30 17:42:12 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ